ದಿನಾಂಕ 13.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಎಂ.ಕೆ.., ವಕೀಲರಿಂದಃ**

3. ಈಗ ಸುಮಾರು 5 ವರ್ಷಗಳಿಂದ ನಾನು ಪಂಚಾಯಿತಿ ಸದಸ್ಯನಾಗಿರುತ್ತೇನೆ. ನರೇಗಾ ರಸ್ತೆ ಮಾಡಲು ಸುಮಾರು 8-9 ಜಮೀನಿನ ಸರ್ವೇ ನಂ ನ್ನು ಒಳಗೊಂಡಂತೆ ನಿಗದಿಯಾಗಿರುತ್ತದೆ. ಸದರಿ ಜಮೀನಿನನ್ನು ಹೊರತು ಪಡಿಸಿ 1ನೇ ಆರೋಪಿಯ ಕುಟುಂಬಕ್ಕೆ ಸೇರಿದ ಜಮೀನಿನ ಒಳಗೆ ರಸ್ತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಕುಟುಂಬಕ್ಕೆ ಸೇರಿದ ಜಮೀನಿನಲ್ಲಿನಾವು ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರಾಸಾ 1 ರವರ ವಿರುದ್ಧ ಕನಕಪುರ ನ್ಯಾಯಾಲಯದಲ್ಲಿ ಸಿಸಿ 828/2023 ದಾಖಲಾಗಿದ್ದು ಅದರಲ್ಲಿ ನಾನು 2ನೇ ಆರೋಪಿ ಎಂದರೆ ಸರಿ. ನಾನು ಮತ್ತು ಆರೋಪಿಗಳು ಒಂದೇ ಊರಿನವರು ಎಂದರೆ ಸರಿ. ನಾನು ಮತ್ತು ಆರೋಪಿಗಳು ಒಂದೇ ಜನಾಂಗ ಎಂದರೆ ಸರಿ .

4. ಮಾರಮ್ಮನ ದೇವಸ್ಥಾನದ ಬಳಿ ಯಾರು ಯಾರು ಬಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ನಾನು ಪ್ರಾಸಾ 1 ರವರನ್ನು ಬರಲು ಹೇಳಿದ್ದೆ ಎಂದು ಉತ್ತರಿಸಿರುತ್ತಾರೆ. ನಾನು ಮಾರಮ್ಮನ ದೇವಸ್ಥಾನದ ಬಳಿಯೇ ಬರುವಂತೆ ಕರೆದಿದ್ದೆ. ಪ್ರಾಸಾ 1 ಮಾರಮ್ಮನ ದೇವಸ್ಥಾನದ ಬಳಿ ಬಂದಿಲ್ಲ, ಆರೋಪಿಗಳು ತಮ್ಮ ಖಾಸಗಿ ಜಮೀನಿನಲ್ಲಿ ರಸ್ತೆ ನಿರ್ಮಾಣ ಮಾಡಿರುವುದನ್ನು ಕೇಳಲು ಬಂದಿದ್ದ ಕಾರಣ ಸುಳ್ಳು ದೂರು ಕೊಡಲಾಗಿದೆ ಎಂದರೆ ಸರಿಯಲ್ಲ.

5. ನಿಶಾನೆ ಪಿ 2 ಮಹಜರ್ ಸಮಯದಲ್ಲಿ ನಾನು ಸ್ಥಳದಲ್ಲಿ ಇದ್ದೆ. ಸಾಕ್ಷಿಗೆ ನಿಶಾನೆ ಪಿ 3 ಮತ್ತು 4 ಫೋಟೋವನ್ನು ನೋಡಲು ಕೊಟ್ಟಿದ್ದು, ಸದರಿ ಫೋಟೋದಲ್ಲಿ ನಾನು ಇಲ್ಲ ಎಂದು ಉತ್ತರಿಸಿರುತ್ತಾರೆ. ಮಹಜರ್ ನ್ನು ಮಾರಮ್ಮನ ದೇವಸ್ಥಾನದ ಬಳಿ

ಬರೆಯಲಾಗಿದೆ. ಆಗ ಮುನಿವೀರಯ್ಯ, ರಾಜೇಗೌಡ, ಮುನಿಮಾರೇಗೌಡ, ಕುಳ್ಳಣ್ಣ ಇದ್ದೆವು. ಅವರುಗಳೆಲ್ಲಾ ಮಹಜರ್ ಗೆ ಸಹಿ ಮಾಡಿರುತ್ತಾರೆ.

6. ಘಟನೆ ನಡೆಯುವ ಸಮಯದಲ್ಲಿ ನಾನು ಮತ್ತು ಪ್ರಾಸಾ 1 ಅಲ್ಲದೇ ಊರಿನ ಜನ ಎಲ್ಲಾ ನೋಡುತ್ತಾ ನಿಂತಿದ್ದರು. ಯುಗಾದಿ ಹಬ್ಬ ಇದ್ದ ಕಾರಣ ಜನ ಎಲ್ಲಾ ದೇವಸ್ಥಾನದ ಬಳಿ ಸೇರಿದ್ದರು ಎಂದರೆ ಸಾಕ್ಷಿ ಆ ಸಮಯದಲ್ಲಿ ಸೇರಿದ್ದರು ಎಂದು ಉತ್ತರಿಸಿರುತ್ತಾರೆ. ಯಾವ ಕಂಪನಿಯ ಮೊಬೈಲ್ ನ್ನು ಹೊಡೆದು ಹಾಕಲಾಗಿದೆ ಎಂದು ನನಗೆ ಗೊತ್ತಿಲ್ಲ. ನರೇಗಾ ರಸ್ತೆ ಯನ್ನು ಆರೋಪಿಗಳ ಸ್ವಂತ ಜಮೀನಿನಲ್ಲಿ ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಸರ್ಕಾರದವರು ನಕಾಶೆ ಜಾಗದಲ್ಲಿ ರಸ್ತೆ ನಿರ್ಮಿಸಲು ಹೇಳಿದ್ದರೂ ಸಹ ಆರೋಪಿಗಳ ಖಾಸಗಿ ಜಾಗದಲ್ಲಿ ಅದನ್ನು ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ. ಖಾಸಗಿ ಜಾಗದಲ್ಲಿ ನಿರ್ಮಿಸಿರುವಂತಹ ರಸ್ತೆಯನ್ನು ತೆರವು ಮಾಡಲು ಆರೋಪಿಗಳು ಕೇಳಿಕೊಂಡಿರುವ ಕಾರಣ ನಾನು ಮತುತ ಪ್ರಾಸಾ 1 ಶಾಮೀಲ್ ಆಗಿ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಾಸಾ 1 ಪರಿಶಿಷ್ಟ ಜಾತಿಗೆ ಸೇರಿದವನಾಗಿರುವ ಕಾರಣ ಆತನ ಜೊತೆ ಸೇರಿ ದೂರು ಕೊಡಲಾಗಿದೆ ಎಂದರೆ ಸರಿ. 2ನೇ ಆರೋಪಿ ವಿದ್ಯಾರ್ಥಿಯಾಗಿದ್ದು, ಅವರ ಭವಿಷ್ಯಕ್ಕೆ ತೊಂದರೆಯಾಗುವ ಉದ್ದೇಶದಿಂದ ಸುಳ್ಳು ದೂರನ್ನು ಕೊಡಲಾಗಿದೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿಗಳಿಗೆ ತೊಂದರೆ ಕೊಡುವ ಕಾರಣದಿಂದ ಸುಳ್ಳು ದೂರು ಕೊಡಲಾಗಿದೆ ಎಂದರೆ ಸರಿಯಲ್ಲ. ರಾಜಕೀಯವಾಗಿ ದುರುದ್ದೇಶದಿಂದ ಸೃಷ್ಟನೆಯ ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ರಿಂದ 3 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

7. ಕನಕಪುರ ಸಿವಿಲ್ ನ್ಯಾಯಾಲಯದಲ್ಲಿಯೂ ಸಹ ಈ ಜಮೀನಿನ ತಕರಾರಿಗೆ ಸಂಬಂಧಪಟ್ಟಂತೆ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ನಾನು ಪಂಚಾಯಿತಿಯ ಮಾಜಿ ಸದಸ್ಯನಾಗಿರುವ ಕಾರಣ ನನ್ನ ಪದವಿಯನ್ನು ದುರುಪಯೋಗ ಪಡಿಸಿಕೊಂಡು ಆರೋಪಿಗಳಿಗೆ

ಯಾವುದೇ ನೋಟೀಸ್ ಕೊಡದೇ ಅವರ ಖಾಸಗಿ ಜಾಗದಲ್ಲಿ ರಸ್ತೆ ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**